# ನಿರ್ಭೀತ ಚಿಂತಕ

■ ಪ್ರವೀಣ ಕುಲಕರ್ಣಿ

ಪರಕಳ ಪ್ರಭಾಕರ ಅವರು ಲೋಕದ ನೈಜ ಸಂಗತಿಗಳನ್ನು ತೀರ ಸರಳವಾಗಿ ಹೇಳುವುದನ್ನು ನೋಡುವಾಗ ಸತ್ಯವನ್ನು ಹೀಗೆ, ಮುಟ್ಟಿದರೆ ಕೈ ಕೊರೆಯುವ ತಣ್ಣನೆಯ ಮಂಜುಗಡ್ಡೆಯಂತೆ ಹೇಳಿದ ಲೇಖಕ ಹಸನ್ ಸಾದತ್ ಮಾಂಟೊ ಅವರ ನೆನಪು ಹಲವರನ್ನು ಕಾಡಿರಲಿಕ್ಕೂ ಸಾಕು. ಪ್ರಭಾಕರ ಅವರೊಬ್ಬ ಹರಿತ ರಾಜಕೀಯ ಚಿಂತಕ. ಅಷ್ಟೇ ದೊಡ್ಡ ಅರ್ಥಶಾಸ್ತ್ರಜ್ಞ. ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಹಣಕಾಸು ಸಚಿವೆಯಾಗಿರುವ ನಿರ್ಮಲಾ ಸೀತಾರಾಮನ್ ಅವರ ಪತಿ. ಹೀಗಿದ್ದೂ ಮೋದಿ ಅವರನ್ನೂ ಅವರ ಸಂಪುಟದ ಹಲವು ಸಚಿವರನ್ನೂ ಅಷ್ಟೇ ಏಕೆ, ಸ್ವತಃ ಹಣಕಾಸು ಸಚಿವೆಯನ್ನೂ ಕಾಲೆಳೆದು, ಅವರ ವೈಫಲ್ಯಗಳಿಗೆ ಕನ್ನಡಿ ಹಿಡಿದ ಚಿಂತಕ.

ಪರಕಳ ಅವರು ಆರಂಭಿಸಿದ **‘Midweek Matters’** ವಿಡಿಯೊ ಬ್ಲಾಗ್‌ನ ಮಾತು ಕೇಳಲು ದೇಶದ ನೂರಾರು ಪ್ರಜ್ಞಾವಂತರು ಬುಧವಾರ ಮಧ್ಯಾಹ್ನ 1ರ ಹೊತ್ತಿಗೆ ಕಿವಿಯರಳಿಸಿ ಕೂರುತ್ತಾರೆ. ಚರ್ಚೆಗೆ ಅವರು ಆಯ್ದುಕೊಳ್ಳುವ ಸಂಗತಿಗಳೇ ಹಾಗಿರುತ್ತವೆ. ಅದು ಸರ್ದಾರ್ ಪಟೇಲ್ ಕ್ರೀಡಾಂಗಣದ ಹೆಸರು ಬದಲಿಸಿ ಮೋದಿ ಅವರ ಹೆಸರು ನಾಮಕರಣ ಮಾಡಿದ ಸಂಗತಿಯೇ ಆಗಿರಬಹುದು, ಕೋವಿಡ್ ಪ್ರಕರಣವನ್ನು ಸರ್ಕಾರ ನಿಭಾಯಿಸುವಲ್ಲಿ ಎಡವಿದ ವಿಷಯವೇ ಆಗಿರಬಹುದು, ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ತು (ಐಸಿಎಚ್‌ಆರ್) ಸ್ವಾತಂತ್ರ್ಯ ಹೋರಾಟಗಾರರ ಪೋಸ್ಟರ್‌ನಲ್ಲಿ ಜವಾಹರಲಾಲ್ ನೆಹರೂ ಅವರ ಚಿತ್ರಕ್ಕೆ ಜಾಗ ಕಲ್ಪಿಸದ ವಿದ್ಯಮಾನವೇ ಇರಬಹುದು ಮುಲಾಜಿಲ್ಲದೆ ಸರ್ಕಾರದ ಮೇಲೆ ಚಾಟಿ ಬೀಸಿದವರು ಅವರು.



ಪತ್ನಿಗೆ ಪ್ರಭಾವಿ ಹುದ್ದೆ ನೀಡಿರುವ ಸರ್ಕಾರವನ್ನು ಹೀಗೆ ಎದುರು ಹಾಕಿಕೊಂಡು ಟೀಕಿಸುವುದು ಅಷ್ಟು ಸುಲಭವಲ್ಲ. ದೇಶಕ್ಕೆ ಹಣಕಾಸು ಸಚಿವೆಯಾಗಿದ್ದರೂ ಪರಕಳ ಕುಟುಂಬದ ‘ಗೃಹಮಂತ್ರಿ’ಯಾದ ನಿರ್ಮಲಾ, ಪತಿಯೊಂದಿಗೆ ಮನೆಯಲ್ಲಿ ನಡೆಸಿರಬಹುದಾದ ತುರುಸಿನ ಚರ್ಚೆಯನ್ನು ಕಲ್ಪಿಸಿಕೊಳ್ಳುವುದು ಕೂಡ ಅಷ್ಟು ಕಷ್ಟವಲ್ಲ. ಆದರೆ, ಪ್ರಭಾಕರ ಅವರ ಹರಿತ ಚಿಂತನೆಯ ಹರಿವಿಗೆ ಯಾವುದೇ ತಡೆ ಬಿದ್ದಿಲ್ಲ. ‘ಸಾರ್ವಜನಿಕ ನೀತಿಗಳ ಬಗೆಗೂ ರಾಜಕೀಯ ಬೆಳವಣಿಗೆಗಳ ಬಗೆಗೂ ನನಗೆ ವಿಶ್ಲೇಷಣೆ ನಡೆಸುವ ಆಸಕ್ತಿ. ಪ್ರಚಲಿತ ವಿದ್ಯಮಾನಗಳ ಕುರಿತು ಗೆಳೆಯರು ಮಾತನಾಡುವಂತೆ ಒತ್ತಾಯ ಮಾಡುತ್ತಿದ್ದರು. ವಿಡಿಯೊ ಬ್ಲಾಗ್ ಶುರುಮಾಡಿಬಿಟ್ಟೆ’ ಎಂದು ಅವರು ಹೇಳುತ್ತಾರೆ.

**‘Midweek Matters’** ಅಂತ ನಿಮ್ಮ ಬ್ಲಾಗ್‌ಗೆ ಹೆಸರು ಕೊಟ್ಟಿದ್ದೀರಿ. ಅಲ್ಲದೆ, ವಾರದ ಮಧ್ಯೆ, ಅಂದರೆ ಬುಧವಾರವೇ ಮಾತನಾಡಲು ಬರುತ್ತೀರಿ. ಏನಿದರ ಮಜಕೂರು ಎಂದು ಕೇಳಿದರೆ, ಪ್ರಭಾಕರ ನಗುತ್ತಾ ಉತ್ತರಿಸುವುದು ಹೀಗೆ: ‘ಯಾವುದೇ ವಿಷಯದ ಕುರಿತು ಮಾತನಾಡಲು ಅದರ ಎಲ್ಲ ಆಯಾಮಗಳ ಆಳವಾದ ಅರಿವು ಇರಬೇಕು. ವೀಕ್ ಎಂಡ್‌ನಲ್ಲಿ (ವಾರಾಂತ್ಯ) ನಾನು ಅಂತಹ ಸಿದ್ಧತೆಗೆ ಸಮಯ ಮೀಸಲಿಡುತ್ತೇನೆ. ಬುಧವಾರ ಚರ್ಚೆ ನಡೆಸುತ್ತೇನೆ.’

ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಪ್ರಭಾಕರ ಅವರು ಓದುವ ದಿನಗಳಲ್ಲಿಯೇ ನಿರ್ಮಲಾ ಅವರೂ ಅಲ್ಲಿನ ವಿದ್ಯಾರ್ಥಿನಿಯಾಗಿದ್ದರು. ಪ್ರೀತಿಸಿ ವಿವಾಹವಾದ ಈ ಜೋಡಿ, ಬಳಿಕ ಉನ್ನತ ವ್ಯಾಸಂಗಕ್ಕಾಗಿ ಲಂಡನ್ನಿಗೆ ತೆರಳಿತ್ತು. ಪ್ರಭಾಕರ ಅವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಡಾಕ್ಟರೇಟ್ ಪಡೆದವರು. ಆಂಧ್ರ ಪ್ರದೇಶದಲ್ಲಿ ತುಂಬಾ ಪ್ರತಿಷ್ಠಿತ ಕುಟುಂಬ ಅವರದು. ಅವರ ತಂದೆ–ತಾಯಿ ಇಬ್ಬರೂ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಅವರ ತಂದೆಯವರು ಸಚಿವರೂ ಆಗಿದ್ದರು. ಪರಕಳ ಅವರ ಕುಟುಂಬ ಪಿ.ವಿ. ನರಸಿಂಹರಾವ್ ಅವರೊಂದಿಗೆ ತುಂಬಾ ನಿಕಟ ಸಂಪರ್ಕ ಹೊಂದಿತ್ತು.

ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು ನೇತೃತ್ವದ ಸರ್ಕಾರಕ್ಕೆ ಆರ್ಥಿಕ ಸಲಹೆಗಾರರಾಗಿ ಕ್ಯಾಬಿನೆಟ್ ದರ್ಜೆಯ ಹುದ್ದೆಯಲ್ಲಿ ನಾಲ್ಕು ವರ್ಷ ಕೆಲಸ ಮಾಡಿದ್ದರು ಈ ಅರ್ಥಶಾಸ್ತ್ರಜ್ಞ.

ಕೋವಿಡ್ ಸಂಕಟಗಳ ಕುರಿತು ಪ್ರಭಾಕರ ಅವರು ವಿಶ್ಲೇಷಣೆ ಮಾಡುತ್ತಾ ಹೋದ ರೀತಿ ದೊಡ್ಡಸಂಖ್ಯೆಯ ವೀಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ವಿಶ್ಲೇಷಣೆಯ ಈ ಆರಂಭಿಕ ಮಾತುಗಳನ್ನು ಕೇಳಿಸಿಕೊಳ್ಳಿ:

‘ನಾನೀಗ ಒಂದು ವರದಿಯನ್ನು ಓದುತ್ತೇನೆ. ಕೊರೊನಾ ವೈರಾಣುವಿನಿಂದಾದ ಎಲ್ಲ ಅಧ್ವಾನಗಳ ಕುರಿತು ಪರಿಶೀಲಿಸಲು ಸ್ವತಂತ್ರ ತನಿಖಾ ಸಮಿತಿಯೊಂದು ಇನ್ನೇನು ಕೆಲಸ ಆರಂಭಿಸಲಿದೆ’ ಎಂದು ಪ್ರಧಾನಮಂತ್ರಿ ಘೋಷಿಸಿದರು. ‘ತನಿಖಾ ಸಮಿತಿಯವರು ಕೇಳುವ ಎಲ್ಲ ಪ್ರಶ್ನೆಗಳಿಗೂ ನಾನು ಪ್ರತಿಜ್ಞಾಪೂರ್ವಕವಾಗಿ ಉತ್ತರಿಸುತ್ತೇನೆ’ ಎಂದೂ ಅವರು ಹೇಳಿದರು. ‘ನಮ್ಮ ಪ್ರಧಾನಿಯವರು ಹೀಗೆ ಘೋಷಣೆ ಮಾಡಿದ್ದು ಸತ್ಯವೇ’ ಎಂದು ನೀವು ಪ್ರಶ್ನಿಸಬಹುದು. ಅದು ನಮ್ಮ ಪ್ರಧಾನಿಯ ಘೋಷಣೆ ಅಲ್ಲ. ಬ್ರಿಟಿಷ್ ಪ್ರಧಾನಮಂತ್ರಿ ಬೋರಿಸ್ ಜಾನ್ಸನ್ ಅವರ ಪ್ರಕಟಣೆ.’ – ಪ್ರಭಾಕರ ಅವರ ಪಂಚ್ ಸೊಬಗೇ ಹೀಗೆ.

ಕೊರೊನಾ ಸಂದರ್ಭದ ಅವಘಡಗಳನ್ನು ಯಾವ ಯಾವ ದೇಶ ಹೇಗೆಲ್ಲ ಪರಿಶೀಲನೆಗೆ ಒಳಪಡಿಸಿತು, ಯಾರು, ಯಾರನ್ನು ಹೊಣೆ ಮಾಡಿತು, ಯೂರೋಪಿನ ದೇಶಗಳಲ್ಲಿ ಆರೋಗ್ಯ ಸಚಿವರುಗಳನ್ನು ಹೇಗೆಲ್ಲ ಕಟಕಟೆಗೆ ನಿಲ್ಲಿಸಲಾಯಿತು ಎಂಬುದನ್ನು ಅಧಿಕೃತ ಮಾಹಿತಿ, ಅಧಿಕೃತ ಮೂಲಗಳ ಸಹಿತ ಮಂಡಿಸಿದ ಪ್ರಭಾಕರ ಅವರು, ಮಹಾಸಾಂಕ್ರಾಮಿಕದಿಂದ ನಮ್ಮ ದೇಶದಲ್ಲಿ ನಿಖರವಾಗಿ ಅದೆಷ್ಟು ಸಾವುಗಳು ಸಂಭವಿಸಿವೆ ಎಂಬುದು ಸ್ವತಂತ್ರ ತನಿಖಾ ಸಮಿತಿಯ ಮೂಲಕ ಹೊರಬರಬೇಕಲ್ಲವೆ ಎಂದು ಪ್ರಶ್ನಿಸುತ್ತಾರೆ. ಜಿಎಸ್‌ಟಿಯಲ್ಲಿ ರಾಜ್ಯಗಳ ಪಾಲನ್ನು ಅವುಗಳಿಗೆ ಕೊಡದೆ ‘ದೇವರು ಸೃಷ್ಟಿಸಿದ ಸಂದಿಗ್ಧ ಸಮಯ’ ಎಂದು ತಾರಮ್ಮಯ್ಯ ಮಾಡಿದ್ದ ನಿರ್ಮಲಾ ಅವರನ್ನೂ ಪ್ರಭಾಕರ ಅವರು ಕುಟುಕದೇ ಬಿಟ್ಟವರಲ್ಲ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65